ಹೆಂಡತಿ ಮಕ್ಕಳಿಗಾಗಿ ಚೂರುಪಾರು ಆಸ್ತಿ ಇನ್ನೂ ಇಟ್ಟವರ ಬಗ್ಗೆ, ಚಂಡಿ ಸ್ವಭಾವದವಳಿಗೆ ಗಂಡನ ಮೇಲೆ ಇರುವ ವಿಪರೀತ ಪ್ರೀತಿಯ ಬಗ್ಗೆ... ಹೀಗೆ ಅವರ ಅಸಂಖ್ಯಾತ ಅವಗುಣಗಳ ಮಧ್ಯೆ, ಒಂದಾದರೂ ಮೆರಿಟ್ ಪಾಯಿಂಟ್ ಹುಡುಕಿ ತೆಗೆದು, ಬಿದ್ದವರ ಮೀಸೆ ಮಣ್ಣಾಗದಂತೆ ಕಾಳಜಿ ವಹಿಸುತ್ತಾರೆ.

ಬಹಳಷ್ಟು ಪುಸ್ತಕಗಳನ್ನು ಬರೆಯಲಾಗದ ಒಬ್ಬ ಸಾಹಿತಿ, 'ರ್‍ರೀ ಸ್ವಾಮೀ, ನಾನು ಬರದಿರೋದು ತುಸು ಇರಬಹುದು, ಅವನಷ್ಟು ಬರೆದಿಲ್ಲಾ ಒಪ್ಕೋತೀನಿ, ಆದರೇನಂತೆ, ನನ್ನದು ಸತ್ತ್ವಭರಿತ ಸಾಹಿತ್ಯ ಕಣ್ರೀ! ಹತ್ತು ಹಡೆಯೋದಕ್ಕಿಂತ ಮುತ್ತಿನಂತ ಒಂದೇ ಒಂದು ಮಗುನ್ನ ಪಡೀಲಿಕ್ಕೂ ಪುಣ್ಯಾ ಮಾಡೀರಬೇಕು. ನಾನು ಬರೆದಿರೋದು ಚಿನ್ನ! ಚಿನ್ನದಂತಹ ಅಸಲ ರಸಭರಿತ ಸಾಹಿತ್ಯ' ಅಂತಿರ್ತಾನೆ. ಅದೆಂಥ ರಸಭರಿತವೊ, ಉದರದುರಿತ ಸಾಹಿತ್ಯವೋ, ಆ ಸಾಹಿತ್ಯ ಶಾರದೆಯೆ ಹೇಳಬೇಕು.

'ಕುಲಕೆಟ್ಟರೂ ಸುಖದಲ್ಲಿ ಬೀಳಬೇಕು' ಅಂತಹದೆ ಒಂದು ಗಾದೆ ಮಾತು. ರಾಜ ವೈಭವದ ಅಷ್ಟೈಶ್ವರ್ಯ ಆಚೆಗಿಟ್ಟು, ಅಷ್ಟಾವಕ್ರನ ಕೂಡಿಕೊಂಡ ರಾಣಿ ಅಮೃತಮತಿಯ ಕತೆ ನಿಮಗೆ ಗೊತ್ತಲ್ಲ! ಅಂತಃಪುರ ಬಿಟ್ಟು, ಆಕೆ ಕುದುರೆ ಲಾಯಕ್ಕೆ ಬಂದು, ನಾಲಾಯಕ ಕೆಲಸ ಮಾಡಿರಬಹುದು, ನೈತಿಕವಾಗಿ ಬಿದ್ದಿರಬಹುದು... ಆದರೇನಂತೆ, ಅರಮನೆಯಲ್ಲಿ ಸಿಗದ ಸಖ್ಯ ಸುಖ ಉಂಡಳಲ್ಲ!

ಮಾವ ಹರಿಹರನಿಂದ ಹೊಡೆಸಿಕೊಂಡು, ಹಲ್ಲು ಉದುರಿಸಿಕೊಂಡ ಕವಿ ರಾಘವಾಂಕ, ಉದುರಿದ್ದ ತನ್ನ ಹಲ್ಲುಗಳ ಸಂಖ್ಯೆಗೆ ಸರಿಸಮವಾಗಿ ಮಹಾಕಾವ್ಯ ಬರೆದನಂತೆ. ಈತನಿಗೂ, ಮತ್ತೆ ಆ ಅಮೃತಮತಿಗೂ ಅದೇ ಸಾರ್ಥಕ್ಯ ಭಾವ ಇರಬಹುದೇನೋ?

ಬಾಲ ಅಥವಾ ತಲೆ – ಇವುಗಳಲ್ಲಿ ಒಂದನ್ನು ಕಳೆದುಕೊಳ್ಳಲೇಬೇಕಾದ ಅನಿವಾರ್ಯತೆ ಎದುರಾದಾಗ ಬಾಲವನ್ನು ಬಲಿಕೊಟ್ಟು, ತಲೆ ಉಳಿಸಿಕೊಳ್ಳುವುದು ತಲೆವಂತರ ಲಕ್ಷಣ. ಅಂಥ ತಲೆವಂತ ಹುಡುಗನೊಬ್ಬ ಅಂದಗೇಡಿ ಹುಡುಗಿಯನ್ನು ಮದುವೆಯಾಗಿದ್ದಾನೆಂದಿಟ್ಟುಕೊಳ್ಳಿ...

'ಹುಡುಗಿ ಕರ್‍ರಗಿದ್ದರೇನಾತು ಬಿಡು, ಕಂಡಾಪಟಿ ವರದಕ್ಷಿಣೆ ಬಂತಲ್ಲ, ಅವ್ನ ಲಕ್ ಅಂದ್ರ ಲಕ್

